ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಬಹಳ ಹಿಂದೆ ಮಾನ್ಯ ಮುಂತ್ರಿಯವರು ನಮ್ಮ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ನನ್ನ ಆಜ್ಞೆಗಳನ್ನು ನಮ್ಮ ಅಧಿಕಾರಿಗಳೇ ಪಾಲಿಸುತ್ತಾ ಇಲ್ಲ ಎಂದು ಹೇಳಿದ್ದಾರೆ. ಅಲ್ಲಿರತಕ್ಕಂಥ ಎಲ್ಲರೂ ದಕ್ಷರು, ಪ್ರಾಮಾಣಿಕರು ಆಗಿದ್ದಾರೆ ಎಂದು ನಾನು ಹೇಳುವುದಿಲ್ಲ. ಅವರಲ್ಲಿ ದಕ್ಷರಾದವರು, ಪ್ರಾಮಾಣಿಕರಾದವರು ಇದ್ದಾರೆ; ಅವರ ಜೊತೆಗೆ ಅಪ್ರಾಮಾಣಿಕರು, ಅಧ್ಯಕ್ಷರೂ ಇದ್ದಾರೆ. ಇವರಿಂದ ಈಗ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಫೀ ರಿಸೀಟ್ಸ್ ತೋರಿಸಿದರೆ ಅದನ್ನು ವೆರಿಫೈ ಮಾಡಿ ಅವರಿಗೆ ಹಣ ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಎಲ್.ಜಿ. ಹಾವನೂರ್.—ತಾವು ಈ ಬಗ್ಗೆ ಯಾವುದೇ ಸಲಹೆಯನ್ನು ಕೊಟ್ಟರೂ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ.ಪಿ. ಬಸಪ್ಪ.—ಸ್ವಾಮಿ, ತಮ್ಮ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗೆ ಶುಲ್ಕದ ಬಗ್ಗೆ ವಿನಾಯಿತಿ ಕೊಡುವುದೇ ಆಗಲೀ, ಸ್ಕಾಲರ್‌ಷಿಪ್ ಕೊಡುವುದೇ ಆಗಲೀ ಅದನ್ನು ಪ್ರತಿವರ್ಷ ಮಾರ್ಚ್ ೩೧ನೇ ತಾರೀಖು ಕಳೆದಮೇಲೆ ನಿಧಾನವಾಗಿ ಕೊಡುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದನ್ನು ಇನ್ನೂ ಮುಂಚಿತವಾಗಿ ಕೊಡುವ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಲ್.ಜಿ. ಹಾವನೂರ್.—೨ ವರ್ಷಗಳಿಂದ ಆದಂಥ ಒಂದು ಪರಿಣಾಮ ಇದು. ಅನೇಕ ಕಾರಣಗಳಿಂದ ಈ ರೀತಿ ತಪ್ಪಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಆದಂಥ ತೊಂದರೆಯಿಂದಾಗಿ ಈಗ ನಾವು ಅವರಿಗೆ ದುಡ್ಡು ಕೊಟ್ಟಿದ್ದೇವೆ. ಇನ್ನು ಮುಂದೆ ಅಂತ ತೊಂದರೆಯಾಗದಂತೆ ನೋಡಿಕೊಳ್ಳಲು ಈಗಾಗಲೇ ನಾವು ಒಂದು ಜಿ.ಓ ಹೊರಡಿಸಿದ್ದೇವೆ. ಮತ್ತು ವಿದ್ಯಾರ್ಥಿಗಳಿಗೆ ಒಂದು ವರ್ಷದ ನಂತರ ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್‌ಗಳನ್ನು ಕೊಡುವುದರ ಬದಲಾಗಿ ಆಯಾವರ್ಷವೇ ಅವರಿಗೆ ಹಣವನ್ನು ಕೊಡಲು ಡೆಪ್ಯುಟಿ ಕಮಿಷನರ್‌ರವರಿಗೆ ಸಾಕಷ್ಟು ಹಣವನ್ನು ನಾವು ಕೊಟ್ಟಿದ್ದೇವೆ. ಅಲ್ಲದೇ ಅಲ್ಲಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು ಸರಿಯಾದ ಸರ್ಟಿಫಿಕೇಟ್ ಕೊಟ್ಟರೆ, ಬೊನ ಫೈಡ್ ಸ್ಟೂಡೆಂಟ್ಸ್ ಹಾಗೂ ಬ್ಯಾಕ್‌ವರ್ಡ್‌ಕ್ಲಾಸ್ ಸ್ಟೂಡೆಂಟ್ಸ್ ತೃಪ್ತಿಕರವಾದ ಸರ್ಟಿಫಿಕೇಟ್ ಕೊಟ್ಟರೆ ಅವರಿಗೆ ಸಲ್ಲಬೇಕಾದ ಹಣವನ್ನು ಪ್ರತಿ ತಿಂಗಳು ಕೊಡಬೇಕು ಎಂಬ ಒಂದು ಹೊಸ ಯೋಜನೆಯನ್ನು ಮಾಡಿದ್ದೇವೆ: ಇದಕ್ಕಾಗಿ ಈ ವರ್ಷ ಮುಂದಿನ ೪ ತಿಂಗಳಿಗಾಗಿ ಹಣವನ್ನು ಕೊಟ್ಟಿದ್ದೇವೆ. ಆದ್ದರಿಂದ ಬಹುಷಃ ಈ ವರ್ಷದಿಂದ ಅಂತಹ ಯಾವ ತೊಂದರೆಗಳೂ ವಿದ್ಯಾರ್ಥಿಗಳಿಗೆ ಆಗುವುದಿಲ್ಲವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸಪ್ಪನವರ ಪ್ರಶ್ನೆ, ೩೧೧ (೫೯೬) ನ್ನು ಹೆಲ್ಡ್‌ಓವರ್ ಮಾಡಿದ್ದೇನೆ.

Inclusion of some more Communities in the list of Backward Communities.

(623) SRI H. GANGADHARAN (Krishnaraj).—Will the Minister for Law, Social Welfare and Backward Class be pleased to state.

(*a*) whether it is not a fact that the Minister for Law, Social Welfare and Backward Classes made a statement in Chickmagalur District at the time of Bye-Elections, that some more communities, are going to be included in the list of Backward Communities;

(*b*) if so which are those communities and when are they going to be included in the list of Backward Class Communities?

SRI L.G. HAVANUR.—(Minister for Law, Social Welfare and Backward Classes).

(*a*) It is a fact that the Minister made a statement to the effect that claims of communities castes/sections would be considered by the Backward Class Advisory Board for their inclusion in the list of Backward Classes provided they satisfied the acceptable criteria.

(*b*) Claims are under consideration of the Backward Classes Advisory Board.

SRI H. GANGADHARAN.—In answer to (a) you have stated that het claims of communities castes/sections would be considered by the Backward Class Advisory Board for their inclusion in the list of Backward Classes. Whether such a list of communities has been sent to the Advisory Board; and if so when it was sent; and at what stage of consideration it is standing now?

† SRI L.G. HAVANUR.—The Backward Class Advisory Board was constituted soon after the acceptance of the Commission's report to consider the claims of different communities left out provided they satisfy certain prescribed acceptable criteria relating to social and educational backwardness. In the meantime, Government issued Government orders on the basis of Commission's report which was challenged in the High Court. So, the Board was awaiting the judgement of the High Court. Now, the High Court gave its decision last month. A copy of the judgement was secured by us on 17th or 18th. If any section or caste or community feels that they should have been termed as backward class, on the basis of the decision of the High Court, hon'ble Members and every section of the society could study the same and suggest modification. With the result, the Government could accept any suggestions made by hon'ble Members provided they will have to satisfy the requirements of the judiciary.

SRI H. GANGADHARAN.—You have made a statement in the Chickmagalur by-election. When you say something, you mean something. You never say anything just to defraud the voters. You said that some communities are going to be included. Whether some sub-sections of the Lingayat community included in the list? Whether you have made such a statement with that intention?

SRI L.G. HAVANUR.—Hon'ble Member should know under which circumstance I made the statement. It was I who came out with such a voluntary statement when 36 Lingayat legislators belonging to our Congress (I) party met in a hotel under the Presidentship of Sri M.P. Ishwarappa and B.T. Somanna and declared that they should work for the Congress Party (I) in the election and Lingayat.

community people should not go by caste consideration. The reason for such a statement was that just a day before, Mr. J.B. Mallaradhya, President of the Lingayat Maha Sabha issued a statement and said that all Lingayat voters should consider if their religious and Saved duty to support the candidature of Mr. Veerendra Patil. When Mr. Ishwarappa was questioned why they oppose the Havanur Commission report, he said that they have constituted a sub-committee of legislators consisting of 9 members who would study the report and make a representation to the Government for inclusion of some sections of the Lingayat community. It was in that context I welcomed the gesture instead of allowing the issue to turn into demonstration and burning the report. If there are any Lingayat sections who would satisfy the tests laid down by the Judiciary, there is an Advisory Board for that purpose.

I shall definitely consider not only in respect of Lingayats but other communities also. I have not made any categorical statement. It is the duty of the Board to consider the claims. Just because a particular community or a particular person appears before me, I cannot include that caste or community in the list. You have got to satisfy the requirements laid down by the dujiciary.

12-30 P.M.

MR. SPEAKER.—Mr. Gangadhar, should elicit information. He should make a statement. This is guestion Hour. ತಾವು ಭಾಷಣ ರೂಪದಲ್ಲಿ ಪ್ರಶ್ನೆ ಕೇಳಿದರೆ ಮಂತ್ರಿಗಳೂ ಸಹ ಆದನ್ನು ವಿಶದಪಡಿಸಬೇಕಾಗುತ್ತದೆ. ಇದು ಬಹಳ ಕಾಲ ತೆಗೆದು ಕೊಳ್ಳುತ್ತದೆ. ಇದು ಸರಿಯಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇದು ಮಹತ್ವರವಾದ ವಿಚಾರ. ಪ್ರಶ್ನೋತ್ತರ ಕಾಲದಲ್ಲಿ ಎಲ್ಲ ವಿವರಗಳನ್ನೂ ಸದಸ್ಯರೂ ಕೇಳಲು ಆಗುವುದಿಲ್ಲ ಮತ್ತು ಮಾನ್ಯ ಸಚಿವರು ಹೇಳಲೂ ಆಗುವುದಿಲ್ಲ. ಆದರೆ ಹಾವನೂರು ಸಮಿತಿ ವರದಿ ಬಂದಮೇಲೆ, ಯಾವುದಾದರೂ ಜಾತಿ ಅಥವಾ ಜಾತಿಗಳು ಹಿಂದುಳಿದಿದ್ದು ಅವುಗಳು ಈ ವರದಿಯಲ್ಲಿ ಸೇರಿರದಿದ್ದರೆ ಅವುಗಳನ್ನು ವಿಚಾರ ಮಾಡುವುದಕ್ಕೆ ಒಂದು ಸಲಹಾ ಸಮಿತಿ ಮಾಡಬೇಕೆಂದು ಹಾವನೂರ್ ಅವರೇ ಶಿಫಾರಸು ಮಾಡಿದ್ದರು ಆದರ ಪ್ರಕಾರ ನಾಲ್ಕು ವರ್ಷಗಳ ಹಿಂದೆಯೇ ಸಲಹಾ ಸಮಿತಿಯನ್ನು ಮಾಡಲಾಗಿದೆ. ಇದಾದ ಮೇಲೆ ೧೯೭೮ ರ ಚುನಾವಣೆ ಮುಂಚೆ ಕೆಲವು ಶಾಸಕರು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದಾಗ, ಇದನ್ನು ಆದಷ್ಟು ಜಾಗತ್ರೆ ಪರಿಶೀಲಿಸಲಾಗುವುದೆಂದು ಅವರು ಹೇಳಿದ್ದರು. ಆದುದರಿಂದ, ಈಗ ಆದಕ್ಕೂ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪಿಗೂ ಯಾವ ಸಂಬಂಧವೂ ಇಲ್ಲ. ಯಾವುದನ್ನು ಕೊಡಬೇಕಾದರೂ ಮೆರಿಟ್ ಮೇಲೆ ಕೊಡಬೇಕಾಗುತ್ತದೆ. ನಾಲ್ಕು ವರ್ಷಗಳ ಹಿಂದೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದು, ಈಗ ಏನಾಗಿದೆ? ಸುಮ್ಮನೆ ರಾಜಕೀಯವಾಗಿ ಇದನ್ನು ಉಪಯೋಗಿಸಿಕೊಂಡು ಚುನಾವಣೆಯಾಗುವ ಸಮಯದಲ್ಲಿ ವಚನ ಕೊಟ್ಟು ಆ ಮೇಲೆ ಮರೆಯಬಾರದು. ಈಗಾಗಲೇ ಅನೇಕ ಶಾಸಕರು ಮತ್ತು ಸಾರ್ವಜನಿಕರು ಮಾಡಿರುವ ಮನವಿ ಸರ್ಕಾರದ ಮುಂದಿದೆ. ಆದನ್ನು ಎಷ್ಟು ದಿವಸದಲ್ಲಿ ಪರಿಶೀಲಿಸುವರೆಂಬುದನ್ನು ಮಾನ್ಯ ಸಚಿವರು ತಿಳಿಸುವರೆ?

ಶ್ರೀ ಎಲ್.ಜಿ. ಹಾವನೂರ್.—ನಮ್ಮ ಕರ್ನಾಟಕದಲ್ಲಷ್ಟೇ ಅಲ್ಲ, ಇಡೀ ದೇಶದಲ್ಲೇ ಜಾತಿಗಳ ವಿಷಯ, ಅದರಲ್ಲೂ ಹರಿಜನರ ಗಿರಿಜನ ಮತ್ತು ಹಿಂದುಳಿದವರಿಗೆ ಏನಾದರೊಂದು ಕಲ್ಯಾಣ ಕಾರ್ಯ ಹಾಕಿಕೊಳ್ಳಬೇಕೆಂದಾಗ ಅದಕ್ಕೆಲ್ಲ ರಾಜಕೀಯ ಬಣ್ಣ ಅಂಟಿಸುವುದು ಪ್ರತಿಪಕ್ಷದ ಒಂದು ಸ್ವಭಾವ ಗುಣ. ಆದರೆ, ನಾವು ಮಾಡುತ್ತಿರುವುದು ಸಮಾಜ ಕಲ್ಯಾಣದ ಕೆ ಸ. ಇದು ರಾಜಕೀಯ ಪ್ರಶ್ನೆಯಲ್ಲ. ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲ. ಇಡೀ ದೇಶದಲ್ಲಿ ಎಲ್ಲೇ ಆಗಲಿ, ಎಲ್ಲಿಯವರೆಗೆ ಕೆಲವು ವರ್ಗಗಳು ಅತ್ಯಂತ ಕೆಳಮಟ್ಟದಲ್ಲಿರುತ್ತವೆ ಅಲ್ಲಿಯವರೆಗೆ ಯಾರೂ ರಾಜಕೀಯ ಮಾಡಲಿಕ್ಕೆ ಸಾಧ್ಯವಿಲ್ಲ. ಆದರೆ, ನಮ್ಮ ಸರ್ಕಾರ ಅವರ ಬಗ್ಗೆ ಅನುಕಂಪದಿಂದ, ಅವರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಬೇಕು, ಸಮಾಜದಲ್ಲಿ ಅವರಿಗೆ ಸಮಾನತೆ ತಂದುಕೊಟ್ಟು, ಅವರೂ ಮಾನವರಾಗಿ ಜೀವನ ಮಾಡಲೆಂಬ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಂಡಿದ್ದೇವೆಯೇ ಹೊರತು ರಾಜಕೀಯವಾಗಿ ಹಾಕಿಕೊಂಡಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಬೇಕಾಗಿದೆ. ಅಲ್ಲದೆ, ನಾನು ಅಂತಹ ವ್ಯಕ್ತಿಯೂ ಅಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಬೇಕಾಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ನಿಮಗೆ ಹೇಳಲಿಲ್ಲ.

ಶ್ರೀ ಎಲ್.ಜಿ. ಹಾವನೂರ್.—ನಾನು ಬೆಂಗಳೂರಿಗೆ ಬರುವ ಮುಂಚೆ ಸಾಮಾನ್ಯ ಲಾಯರ್ ಆಗಿದ್ದಾಗ ಹರಿಜನ ಗಿರಿಜನ ಮತ್ತು ಹಿಂದುಳಿದವರ ಬಗ್ಗೆ ೧೯೫೨ನೇ ಇಸವಿಯಿಂದಲೂ ಧಾರವಾಡ ಜಿಲ್ಲೆಯಲ್ಲಿ ಆಂಧೋಳನ ಮಾಡುತ್ತಿದ್ದುದು ಮಾನ್ಯ ಬೊಮ್ಮಾಯಿಯವರಿಗೆ ಗೊತ್ತಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಆ ಪ್ರಶ್ನೆ ಕೇಳಲಿಲ್ಲ. ಮಾನ್ಯ ಹಾವನೂರರ ಚರಿತ್ರೆ ನನಗೆ ಗೊತ್ತಿದೆ; ಅವರ ಪ್ರಗತಿಪರ ವಿಚಾರವೂ ಗೊತ್ತಿದೆ. ಅವರ ಬಗ್ಗೆ ವೈಯಕ್ತಿಕವಾಗಿ ಗೌರವವೂ ಇದೆ. ಆದರೆ, ಈಗ ಅದನ್ನು ಹೇಳುವುದರ ಅವಶ್ಯಕತೆ ಇಲ್ಲ. ಸಲಹಾ ಸಮಿತಿ ಮಾಡಿ ನಾಲ್ಕು ವರ್ಷ ವಾಯಿತು, ಆಗ ಕೊಟ್ಟ ಮಾನವಿ ಇನ್ನೂ ಪರಿಶೀಲನೆಯಲ್ಲಿದೆಯೆ? ಒಂದು ವೇಳೆ ಇದ್ದರೆ ಅದರ ಬಗ್ಗೆ ಇನ್ನೆಷ್ಟು ಕಾಲದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು?

ಶ್ರೀ ಎಲ್.ಜಿ. ಹಾವನೂರ್.—ನಾಲ್ಕು ವರ್ಷಗಳ ಹಿಂದೆ ಮಾಡಿದ್ದನ್ನುವ ಮಾತು ಸತ್ಯಕ್ಕೆ ಬಹಳವಲ್ಲದಿದ್ದರೂ ಸ್ವಲ್ಪ ದೂರವಾದುದಾಗಿದೆ. ಸಲಹಾ ಸಮಿತಿ ಮಾಡಿದ್ದು ಬಹುಶಃ ೧೯೭೭ ರ ಅಂತ್ಯದಲ್ಲಿ. ಆಷ್ಟರಲ್ಲಿ ಆಗಿನ ಮಂತ್ರಿಮಂಡಲ ಹೋಯಿತು, ಆಗ ವಸಂತರಾವ್ ಪಾಟೀಲರು ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದರು, ಅವರೂ ಹೋದರು. ಆಮೇಲೆ ಶ್ರೀ ಕೆ.ಆರ್.ಎಸ್. ನಾಯ್ಡು ಅವರು ಅಧ್ಯಕ್ಷರಾದರು. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಬಂದ ಕಾರಣದಿಂದಾಗಿ ಅವರೂ ಹೋದರು. ಕಳೆದ ವರ್ಷ ನಾನು ಅದರ ಅಧ್ಯಕ್ಷನಾದೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಸಲಹಾ ಸಮಿತಿ ಮಾಡಿದ್ದು ಯಾವಾಗ?

ಶ್ರೀ ಎಲ್.ಜಿ. ಹಾವನೂರ್.—ಸಲಹಾ ಸಮಿತಿ ರಚನೆಯಾದರೂ ಅದನ್ನು ನಡೆಸಿಕೊಡಲಿಲ್ಲವಲ್ಲ. ಆಗಿದ್ದ ಸರ್ಕಾರವನ್ನು ತೆಗೆಯಲು ಒಂದು ವರ್ಷದಿಂದಲೂ ಸಾಧನೆ ಇತ್ತಲ್ಲ? ನಾನೀಗ ಅಧ್ಯಕ್ಷನಾಗಿ ಬಂದು ಈ ಒಂದು ವರ್ಷವಾಯಿತು. ಮೂವತ್ತೈದು ಮಂದಿ ವೀರಶೈವ ಶಾಸಕರು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟರೇ ವಿನಹ ಯಾರೊಬ್ಬರೂ ನನ್ನಲ್ಲಿಗೆ ಬಂದು ನಮ್ಮ ಜಾತಿ ಅಥವಾ ಜಾತಿಯ ಒಂದು ಭಾಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸಿರೆಂದು ಕೇಳುವ ಮನವಿಯನ್ನು ಕೊಟ್ಟಿಲ್ಲ. ಪತ್ರಿಕೆಯಲ್ಲಿ ಬಂದ ಹೇಳಿಕೆಯ ಕಟಿಂಗ್ ನನ್ನ ಬಳಿ ಇದೆ. ಮಲ್ಲಾರಾಧ್ಯರು ಪತ್ರಿಕೆ ಮುಖಾಂತರ ಹೇಳಿಕೆ ನೀಡಿದ್ದಲ್ಲದೆ ರಾಷ್ಟ್ರಪತಿ ಆಡಳಿತವಿದ್ದ ಕಾಲದಲ್ಲಿ ಮಾನ್ಯ ರಾಜ್ಯಪಾಲರಿಗೆ ಸರ್ಕಾರಿ ಆಜ್ಞೆಯನ್ನು ಸುಡಿರೆಂದು ಹೇಳಿ ಅರ್ಪಿಸಿದ ಮನವಿ ಮತ್ತೆ ನಮ್ಮ ಕಡೆಗೆ ಬಂದಿದೆ. ಅದರಲ್ಲಿ ವೀರಶೈವ ಸಮಾಜವನ್ನು ಅಥವಾ ಅದರ ಯಾವುದಾದರೊಂದು ವರ್ಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆನ್ನುವುದಕ್ಕೆ ಪುಷ್ಟಿ ಕೊಡಲು ಅಂಕಿ ಸಂಖ್ಯೆಗಳ ಆಧಾರವಿಲ್ಲ. ಆದರಲ್ಲಿ ಕಾಣುತ್ತಿರುವುದು ನನ್ನ ಮೇಲೆ ಕೋಪದಿಂದ ರಕ್ತ ಕಾರಿಕೊಂಡಿರುವುದೇ ವಿನಃ ಮತ್ತೇನಿಲ್ಲ. ವೀರಶೈವ ಶಾಸಕರು ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಈಗಲೂ ಅವರು ಬಂದು ಅದನ್ನು ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ಸಲಹೆ ಕೊಟ್ಟಿದ್ದಾದರೆ, ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡಲಿಕ್ಕೆ ನಾನು ಮನಸಾರ ಸಿದ್ಧನಾಗಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮನವಿಗಳು ಬರಲಿ, ಬರದೇ ಇರಲಿ ಯಾವ ಯಾವ ಸಮಾಜಗಳನ್ನು ಪಟ್ಟಿಗೆ ಸೇರಿಸಬೇಕೆನ್ನುವುದನ್ನು ವಿಚಾರ ಮಾಡುವ ಹೊಣೆ ಸಲಹಾ ಸಮಿತಿಗಿದೆ. ಆಯೋಗದ ವರದಿಯಲ್ಲಿ ಅಪ್ಪಿತಪ್ಪಿ ಯಾವುದಾದರೂ ಜಾತಿಗಳು ಸೇರಿಕೊಳ್ಳದೆ ಉಳಿದಿದ್ದರೆ ಅವುಗಳನ್ನು ಸೇರಿಸಲೋಸುಗ ಸಮಿತಿ ಮಾಡಿರುವುದಾಗಿದೆ. ಅದರಂತೆ ಆಯೋಗ ಅನುಸರಿಸಿದ ನಿಯಮಗಳಿಗೊಂದು ಕೊಂಡಂತೆ ಪಟ್ಟಿಯಲ್ಲಿ ಸೇರಿಲ್ಲದ ಜಾತಿಗಳನ್ನು ಹುಡುಕಿ ಅವುಗಳನ್ನು ಪಟ್ಟಿಗೆ ಸೇರಿಸುವ ಕೆಲಸ ಸಲಹಾ ಸಮಿತಿಗಿದೆ. ಆದುದರಿಂದ, ಮನವಿ ಬರಲೇಬೇಕೆಂದೇನಿಲ್ಲ. ಮನವಿ ಬರದಿದ್ದರೂ ಅದಷ್ಟು ಜಾಗತ್ರೆ ಇದನ್ನು ಪರಿಶೀಲಿಸುವಿರಾ?

ಶ್ರೀ ಎಲ್.ಜಿ. ಹಾವನೂರ್.—ನಾವು ಕೇವಲ ಮನವಿ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಲ್ಲ ವೀರಶೈವ ಶಾಸಕರೂ ಬರಲಿ ವಿಶೇಷತಃ ವೀರಶೈವರು ಗಲಭೆ ಮಾಡುತ್ತಿರುವುದರಿಂದ ಪದೇ ಪದೇ ವೀರಶೈವರೆಂದು ನಾನ್ನು ಹೇಳುತ್ತಿದ್ದೇನೆ. ಮಂರಾಠರು ಇದ್ದಾರೆ, ವೈಶ್ಯರಿದ್ದಾರೆ. ಬ್ರಾಹ್ಮಣರೂ ಇದ್ದಾರೆ. ಅವರೆಲ್ಲರೂ ಬರಲಿ. ಯಾವ ರೀತಿಯಲ್ಲಿ ಹೆಚ್ಚು ಪ್ರಮಾಣದಲ್ಲಿ ಅನುಕೂಲ ಒದಗಿಸಿಕೊಡಲಿಕ್ಕೆ ಶಕ್ಯ ಎನ್ನುವುದನ್ನು ದಯವಿಟ್ಟು ಅವರು ಹೇಳಲಿ. ಮೊನ್ನೆ ಕೂಡ ಶ್ರೇಷ್ಠ ನ್ಯಾಯಾಲಯದ ತೀರ್ಪು ಬಂದಿದೆ. ಅದನ್ನೂ ಅಭ್ಯಾಸ ಮಾಡೋಣ. ಯಾವ ರೀತಿ ಅನುಕೂಲ ಮಾಡಿಕೊಡಬೇಕೆನ್ನುವುದನ್ನು ವಿಚಾರ ಮಾಡೋಣ. ೫೦ ಪರ್ಸೆಂಟ್‌ಗಿಂತ ಹೆಚ್ಚು ಪ್ರಮಾಣದಲ್ಲಿ ಮೀಸಲಿಡಲಿಕ್ಕೆ ಅಧಿಕಾರವಿಲ್ಲವೆಂದು ಸುಪ್ರೀಂ ಕೋರ್ಟಿನ ತೀರ್ಪು ಇಲ್ಲಿಯವರೆಗೂ ಇತ್ತು. ಆದರೆ, ಈಗ ರಾಜ್ಯದ ಶ್ರೇಷ್ಠ ನ್ಯಾಯಾಲಯ ೫೦ ಪರ್ಸೆಂಟ್‌ಗಿಂತಲೂ ಮೀರಿ ಮೀಸಲಾತಿ ಇಡಬೇಕೆಂದು ಹೇಳಿದ ಮೇಲೆ, ಅದಕ್ಕೆ ಮಿತಿ ಎಷ್ಟು ಎಂದು ಹೇಳಲಿಕ್ಕೆ ಬರುವುದಿಲ್ಲ. ಬಹುಶಃ ೯೦ ಪರ್ಸೆಂಟ್‌ನವರಿಗೂ ಹೋಗಬಹುದೇನೋ. ಆದುದರಿಂದ, ಸೂಕ್ತ ಪ್ರಮಾಣದಲ್ಲಿ ಹೆಚ್ಚು ಮಾಡಿಕೊಂಡು ಹೋಗಬಹುದು ಅಥವಾ ಬೇರೆ ರೂಪವಾಗಿ ಅದೇ ಜನರಿಗೆ ಆ ಜಾತಿಯ ಹೆಸರು ಹೇಳದಿದ್ದರೂ ಆ ಜಾತಿಗೆ ಸೇರಿದ ಜನರಿಗೆ ಸೌಲಭ್ಯ ದೊರೆಯುವ ಹಾಗೆ ಮಾಡಿರೆಂದು ಸಲಹೆ ಕೊಡಿರಿ. ನಾನದನ್ನು ಸ್ವೀಕಾರ ಮಾಡುವುದಕ್ಕೆ ಸಿದ್ಧನಾಗಿದ್ದೇನೆ.

SRI H. GANGADHARAN.— While reviewing the recent judgement of the High Court, yesterday the Hon. Minister has made a statement regarding striking down 13 castes which were not listed by the Havanur Commission but were later on added to the list by the Government In the judgement they have upheld the report but have made some deletions of backward castes added by the Government.

MR. SPEAKER.— I am not permitting the hon. Member to put Questions in an improper way.

SRI H.GANGADHARAN.—Yes, I am framing the question Is it a fact that some backward communities and castes have been added by the Government ? Whether the Government added many more communities which are not fit for including in the list of backward communities in the opinion of the Commission. On what basis the Government has included and what are the criteria for inclusion of those backward castes beyond the scope of the commission's report?

SRI L. G. HAVANUR.— It is being reported in paper. You might have read which are the communities recommended by the commission and which were added by the Government.

SRI S. R. BOMMAI,— We want to know the criteria on which the Government has included.

SRI L. G. HAVANUR.— It is for the same reason the High Court has struck down the communities which were recommended.

SRI G. B. SHANKAR RAO.— The Hon, Minister has stated that he is considering the inclusion of sub-section among Lingayats in the Backward Commission's report satisfying the creteria. Apart from that after a recent decision of our High Court if the reservation goes beyond 56 percent, why cannot the hon, Minister think of increasing also in special group so that it may help Brahmins. Lingayats, Marathies etc, whoever they may be depending upon certain criteria. Why not the Minister think of increasing the percentage in the special group ?

SRI L. G. HAVANUR - If two Lingayats do not reconcile themselves i.e. Hon, Sri Bommai and Sri Shankar Rao, what can I do?

SRI S. R. BOMMAI.— I strongly object the hon. Minister for bring ing my caste lingayat. I might have born in Lingayat community. There is no question of community here. I stand here only as an elected representative of my constituency. Why do you say that two Lingayats are not reconciling themselves. What is the criteria in considering backwardness whether it is for lingayats, whether it is for Brahmins, whether it is for Marathies etc., who every they may be. Let there be some criteria and according to that criteria, give the benefit to each and every community.

SRI K. BHASKAR NAIDU.— Mr. Speaker, Sir, One question has to be finished within two minutes. Why I am telling this is the time does not permit to elicit so many information in the question hour. Please kindly postpone this issue. If they desire to have a full discussion, et them have a full debate.

MR. SPEAKER.— I quite appreciate the hon. Member's view.

SRI L. G HAVANUR.— I referred to Sri Bommai and Sri Shankar Rao, what I intended to say was the Hon. Members belong to the same community. The fact that I referred to their community does not mean that they are not outside their community. Whatever may be my statement I did not intend to annoy their feelings. Now what my statement would be is as follows: If Sri Bommai and Sri Shankar Rao and similar other Hon. Members who feel that they are victims of some injustice or that they are aggrieved by the present order they may join together and suggest the concensus of decision carried by a majorty of all the 36 legislators. If they bring some suggestions unanimously or atleast majority decision to the notice of the Advisory Committee I will accept the majority and unanimous decision of all the 36 legislators.